




## ಕಥೆ




# ಮಹಾಂತೇಶ ನವಲಕಲ್

ಕಲೆ: ವಿ.ಎಂ. ಮಂಜುನಾಥ್


ಹಗಲಿನಲಿ ಕಣ್ಣು ಕಟ್ಟಿಕೊಂಡು ಜೀವಿಸುವ ಸ್ಥಿತಿ ಅವನದು. ಇಲ್ಲಿಯ ಭೂತ ವರ್ತಮಾನ ಕಾಲಗಳು ಸೃಜಿಸುವ ಪರಿಣಾಮ ಭಯಾನಕ. ಆದರೂ ಆ ಕ್ರಿಯೆಗೆ ಅವನು ಹೊಂದಿಕೊಂಡಿದ್ದ. ಇದು ಮೊದಲನೆ ಜಾಗತಿಕ ಯುದ್ಧ. ರಣಹದ್ದುಗಳು ಈ ಯುದ್ಧದಲಿ ಸತ್ತ ಸೈನಿಕರನ್ನು ತಿನ್ನುತ್ತಿದ್ದಾಗ ಇದೊಂದು ಸ್ವಾಭಾವಿಕ ಪ್ರಕ್ರಿಯೆ ಎಂದು ವೈರಾಗ್ಯಕ್ಕೆ ಒಳಗಾಗಿದ್ದ. ಅಲ್ಲದೆ ಇವನೂ ಸಹ ಕೋಳಿಗೆ ಕಾಳು ಹಾಕುವವನಂತೆ ರಣಹದ್ದುಗಳನ್ನು ಕರೆದು ಕರೆದು ಹೆಣಗಳ ಅಂಗಾಂಗ ತಿನ್ನಲು ಪ್ರಚೋದಿಸುತ್ತಿದ್ದ. ಎಷ್ಟೋ ದೈತ್ಯಾಕಾರದ ರಣಹದ್ಧುಗಳು ಇವನಿಗೆ ಅತ್ಯಂತ ಸನಿಹದ ಗೆಳೆಯರಂತೆ ಆ ಭೀಭತ್ಸ ರಣಾಂಗಣದಲ್ಲಿ ಹುಡುಕಿಕೊಂಡು ಬರುತ್ತಿದ್ದವು. ಎಂತಹ ಸಾಂಗತ್ಯವದು? ರಣಾಂಗದಲ್ಲಿ ಬಿಳಿ ದಾಸವಾಳಕ್ಕೆಲ್ಲಿ ಬೆಲೆ? ಎಲ್ಲೆಂದರಲ್ಲಿ ಕೆಂಪುದಾಸವಾಳದಂತೆ ಹರಡಿಕೊಂಡಿರುವ ಮಾಂಸ ಮಜ್ಜೆ ಒಂದು ಕಡೆಯಾದರೆ, ಮೊತ್ತೊಂದು ಕಡೆ ರಣ ಹದ್ಧುಗಳ ಸಹಸ್ರ ಕೇಕೆ. ಈ ರಣಹದ್ದುಗಳಂತೂ ಒಂದೇ ಕುಕ್ಕಿಗೆ ಸತ್ತ ಮನುಷ್ಯರ ಕಣ್ಣು ಕಿವಿ ತಡ್ಡುಬೀಜಗಳನು ಹಾಗೆಯೇ ನುಂಗುತ್ತಿದ್ದವು. ತಾನು ಸೈನ್ಯದ ಮೇಜರ್ ಜನರಲ್ ಆಗಿ ಎಷ್ಟೋ ಜನರನ್ನು ಕೊಂದಿದ್ದಾನೆ. ಈ ರಣಹದ್ಧುಗಳಿಗೆ ಔತಣದ ಊಟ ಹಾಕಿದ್ದಾನೆ. ಇದು ಎಲ್ಲಾ ಅವನನ್ನು